**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ**

**ಸಿ.ಸಿ. ನಂ. 1728/2017**

| | | |
|---|---|---|
| ಹೆಸರು | ಡಾ.ಧನಂಜಯ | ಪ್ರಾ.ಸಾ.4 |
| ತಂದೆ ಹೆಸರು | ಶ್ರೀಕಂಠಯ್ಯ | ಚಾ.ಸಾ.5 |
| ವಯಸ್ಸು | 46 ವರ್ಷ | |
| ಕೆಲಸ | ವೈದ್ಯಾಧಿಕಾರಿ | ಸಾ.ಪ್ರ.ವ.ಬೋ |
| ಹಾಲಿ ವಾಸ | ಹೊಸಕೋಟೆ | ದಿ: 09.03.2023 |

**ಮುಖ್ಯ ವಿಚಾರಣೆ : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ : –**

ನಾನು 2010 ರಿಂದ 2017ರವರೆಗೆ ನಂದಗುಡಿ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿ:14.03.2017 ರಂದು ಚಾಸಾ.1, 2ರವರು ಹಲ್ಲೆ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ಬಂದಿದ್ದು, ಅವರನ್ನು ಅದೇ ದಿನ ಬೆಳಿಗ್ಗೆ 11.00 ಗಂಟೆಗೆ ಚಾ.ಸಾ.1ರವರನ್ನು ಪರೀಕ್ಷೆ ಮಾಡಿದಾಗ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತದೆ.

1. ತಲೆಯ ಎಡಭಾಗದಲ್ಲಿ ನೋವು ಮತ್ತು ಊತ ಇತ್ತು.
2. ತಲೆಯ ಬಲ ಮುಂಭಾಗದಲ್ಲಿ ನೋವು ಇತ್ತು.
3. ಕೈಗಳ ಮೇಲೆ ತರಚಿದ ಗಾಯ ಇತ್ತು.
4. ಬೆನ್ನಿನ ಎಡಭಾಗದಲ್ಲಿ ನೋವು ಇತ್ತು.

ಚಾ.ಸಾ.2ರವರನ್ನು ಪರೀಕ್ಷೆ ಮಾಡಿದಾಗ ಈ ಕೆಳಕಂಡ ಗಾಯಗಳು ಕಂಡುಬಂದಿರುತ್ತದೆ.

1. ಬಲಮುಂಗೈ ಮೇಲೆ ತರಚಿದ ಗಾಯ
2. ತಲೆಯ ಬಲಭಾಗದಲ್ಲಿ ತರಚಿದ ಮತ್ತು ಒಡೆದ ಗಾಯ ಇತ್ತು.

ಈ ಮೇಲೆ ಹೇಳಿರುವ ಚಾ.ಸಾ.1 ಮತ್ತು 2ರವರಿಗೆ ಆಗಿದ್ದ ಗಾಯಗಳು ಸಾಮಾನ್ಯ ಸ್ವರೂಪದ್ದು ಇತ್ತು, ಅವುಗಳು 24 ಗಂಟೆಯ ಒಳಗೆ ಸಂಭವಿಸಿದವುಗಳಾಗಿರುತ್ತವೆ. ಆ ಕುರಿತು ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಸಾಕ್ಷಿಯು ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.4 ಮತ್ತು ನಿ.ಪಿ.5 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.4[ಎ] ಮತ್ತು ನಿ.ಪಿ.5[ಎ] ಎಂದು ಗುರುತಿಸಲಾಯಿತು.

**ಪಾಟೀ ಸವಾಲು: ಆರೋಪಿಗಳ ಪರ ವಕೀಲರಿಂದ:-**

ಚಾ.ಸಾ.1, 2ರವರು ಚಿಕಿತ್ಸೆಗೆ ಬಂದಿದ್ದಾಗ ಅನೇಕ ರೋಗಿಗಳು ಇದ್ದು ನಿಖರವಾಗಿ ಎಷ್ಟು ಜನ ಇದ್ದರು ಎಂದು ಹೇಳಲು ಬರುವುದಿಲ್ಲ. ಚಾ.ಸಾ.1, 2ರವರ ಜೊತೆ ಆಸ್ಪತ್ರೆಗೆ ಬೇರೆ ಯಾರೂ ಬಂದಿರಲಿಲ್ಲ. ಚಾ.ಸಾ.1, 2ರವರು ಚಿಕಿತ್ಸೆ ನೀಡುವ ಮೊದಲು ಅವರು ಠಾಣೆಗೆ ಹೋಗಿರುವ ಬಗ್ಗೆ ವಿಚಾರಿಸಿದಾಗ ಸದರಿಯವರು ಠಾಣೆಗೆ ಹೋಗಿದ್ದು, ಪೊಲೀಸರು ಚಿಕಿತ್ಸೆ ಪಡೆದುಕೊಂಡು ಬರುವಂತೆ ಹೇಳಿದ್ದರಿಂದ ಬಂದಿದ್ದೇವೆ ಎಂದು ಹೇಳಿದ್ದರು. ಸದರಿಯವರಿಗೆ ಪೊಲೀಸರು ಯಾವುದೇ ಲಿಖಿತ ದಾಖಲೆ ನೀಡಿರಲಿಲ್ಲ ಮತ್ತು ಪೊಲೀಸರು ಜೊತೆಯಲ್ಲಿ ಬಂದಿರಲಿಲ್ಲ. ಚಾ.ಸಾ.1, 2ರವರಿಗೆ ಚಿಕಿತ್ಸೆ ನೀಡುವ ಮೊದಲು ಸುಮಾರು 8-10 ಜನರಿಗೆ ಚಿಕಿತ್ಸೆ ನೀಡಿದ್ದೆವು. ಚಾ.ಸಾ.1, 2ರವರು ಆ ದಿನ ಸುಮಾರು 8-10 ರೋಗಿಗಳ ನಂತರ ಚಿಕಿತ್ಸೆ ಪಡೆದುಕೊಂಡಿದ್ದಾರೆ. ಸದರಿಯವರು ಎಷ್ಟನೇ ರೋಗಿಗಳಾಗಿದ್ದರು ಎಂದು ನಿ.ಪಿ.4, 5ರಲ್ಲಿ ನಮೂದಿಸಿಲ್ಲ ಎಂದರೆ ಸರಿ. ನಿ.ಪಿ.4, 5ರಲ್ಲಿ ಹೇಳಿರುವ ಗಾಯಗಳು ಸಾಮಾನ್ಯವಾಗಿ ನೆಲದ ಮೇಲೆ ಬಿದ್ದಾಗ ಸಂಭವಿಸುತ್ತವೆ ಎಂದರೆ ಸರಿ. ಚಾ.ಸಾ.1, 2ರವರಿಗೆ ನಿ.ಪಿ.4, 5ರಲ್ಲಿ ಹೇಳಿರುವ ದೊಣ್ಣೆಯಿಂದ ಹೊಡೆದು ಹಲ್ಲೆ ಮಾಡಿದ ದೊಣ್ಣೆಯನ್ನು ನಾನು ನೋಡಿಲ್ಲ. ಬಡಿಗೆ ಮತ್ತು ದೊಣ್ಣೆಗಳ ಗಾತ್ರಗಳು ಪ್ರತಿಯೊಂದಕ್ಕೂ ವ್ಯತ್ಯಾಸವಾಗುತ್ತವೆ. ಚಾ.ಸಾ.1, 2ರವರಿಗೆ ಯಾವುದೇ ಗಾಯಗಳಾಗದೆ ಇದ್ದರೂ ಮತ್ತು ಚಿಕಿತ್ಸೆ ನೀಡದೆ ಇದ್ದರೂ ಸುಳ್ಳು ಗಾಯದ ಪ್ರಮಾಣ ಪತ್ರ ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)**

**ಓ.ಹೇ.ಕೇ.ಸ.ಇದೆ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಹೊಸಕೋಟೆ.**